# ಮಹಿಳಾ ವಿಶೇಷ

ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ (ಪ್ರತಿ ಮಂಗಳವಾರ) ಮೈಸೂರು

ಸಂಪುಟ 1 ಸಂಚಿಕೆ 7
Volume 1 Issue 7
ಮಂಗಳವಾರ 13-10-2015
Email: mahilavishesha@yahoo.com

ಹೆಚ್.ವಿ. ವೆಂಕಟಸುಬ್ಬರಾವ್
ಸಂಪಾದಕರು
Mobile : 8880334444 / 9379777793
ಮೈಸೂರು
ಪುಟ 4
ಬೆಲೆ ₹ 2

## ಚಾಮುಂಡಿ ಬೆಟ್ಟದಲ್ಲಿ 2015ರ ದಸರಾ ಉದ್ಘಾಟನೆ - 23ರಂದು ಜಂಬೂ ಸವಾರಿ





ನಾಡಿನಾದ್ಯಂತ ಇಂದಿನಿಂದ ನವರಾತ್ರಿ ಹಬ್ಬವನ್ನು ಆಚರಿಸಲು ಮನೆ ಮನೆಯಲ್ಲಿ ಸಜ್ಜಾಗಿದ್ದಾರೆ. ಬೊಂಬೆಗಳನ್ನು ಜೋಡಿಸಿ ಸಂಜೆಯ ಹೊತ್ತು ಪುಟ್ಟ ಮಕ್ಕಳನ್ನು ಕರೆಸಿ ಬೊಂಬೆಗೆ ಆರತಿ ಎತ್ತಿ ಸಿಹಿ ಹಂಚುವುದು ವಾಡಿಕೆ. ಸಂಘ ಸಂಸ್ಥೆಗಳು ಅವರದ್ದೇ ಆದ ರೀತಿಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತವೆ. ಮೈಸೂರಿನಲ್ಲಿ ನಾಡ ಹಬ್ಬ ದಸರಾವನ್ನು ಗಣ್ಯರ ಸಮ್ಮುಖದಲ್ಲಿ ಇಂದು ಬೆಳಿಗ್ಗೆ ಚಾಮುಂಡಿಬೆಟ್ಟದಲ್ಲಿ ಪ್ರಗತಿ ಪರ ರೈತ ಪುಟ್ಟಯ್ಯರವರು ಉದ್ಘಾಟಿಸಿದರು. ರೈತರೊಬ್ಬರಿಂದ ಚಾಲನೆ ದೊರೆತಿದ್ದು ಒಂದು ಇತಿಹಾಸವೇ. ಈ ಬಾರಿ ಸರಳ ದಸರಾ ಆದರೂ ಎಲ್ಲ ಕಾರ್ಯಕ್ರಮಗಳು ಮನೆರಂಜನೆ ಹಾಗೂ ಅದರಿಂದ ಒಳ್ಳೆಯ ಸಂದೇಶ ದೊರೆಯಲಿ. ರಾಜ್ಯದ ಮುಖ್ಯ ಮಂತ್ರಿ, ಸಚಿವರುಗಳು ನಗರದ ಗಣ್ಯರು ಜಿಲ್ಲಾಧಿಕಾರಿಗಳು ಹಾಗೂ ನಾಗರೀಕರು ಉದ್ಘಾಟನೆಯ ಸಮಾರಂಭದಲ್ಲಿ ಹಾಜರಿದ್ದರು. ಅಂಬಾವಿಲಾಸ ಅರಮನೆಯಲ್ಲಿ ಪ್ರತಿ ವರ್ಷದಂತೆ ವಿಧಿವಿಧಾನಗಳ ರೀತಿಯ ಪೂಜೆ ಪುನಸ್ಕಾರಗಳು ಆರಂಭಗೊಂಡಿತು. ಆಸ್ಥಾನ ಪುರೋಹಿತರು ಹಾಗೂ ರಾಜತನದ ಕುಟುಂಬದವರು ಹಾಜರಿದ್ದರು. ಈ ಬಾರಿ ಯದುವೀರರಿಗೆ ಮೊದಲನೆ ದಸರಾ ಹಬ್ಬ ಇವರಿಗೂ ರಾಜಾಮಾತೆ ಪ್ರಮೋದಾದೇವಿ ಹಾಗೂ ಕುಟಂಬವರ್ಗ ದವರಲ್ಲಿರಿಗೂ ನವರಾತ್ರಿ ಹಬ್ಬದ ಶುಭ ಕಾಮನೆಗಳು.

### ವಿದ್ಯಾರ್ಥಿನಿ ಪದ್ಮಲಕ್ಷ್ಮಿಗೆ ಪ್ರಶಂಸೆ

ಸರ್ಕಾರಿ ಪದವಿ ಪೂರ್ವ ಕಾಲೇಜು, ಕಣಗಾಲು, ಪಿರಿಯಾಪಟ್ಟಣ ತಾಲ್ಲೂಕ್ ಇಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿನಿ ಪದ್ಮ ಲಕ್ಷ್ಮಿ ಮಾನವೀಯತೆ ಗುಣದಲ್ಲಿ ಶ್ರೇಷ್ಠಳಾದಳು. ಮರೂರು ಗ್ರಾಮದ ನಿವಾಸಿ ಚಂದ್ರು ರವರ ಎಟಿಎಂ. ಕಾರ್ಡ್ ನಗದು ಹಣ, ಬ್ಯೆಕ್‌ನ ದಾಖಲೆಗಳನ್ನು ಕೆಲದಿನಗಳ ಹಿಂದೆ ಕಳೆದುಕೊಂಡಿದ್ದರು.

ಈ ವಸ್ತುಗಳೆಲ್ಲವೂ ಪದ್ಮಲಕ್ಷ್ಮಿಗೆ ಕಾಲೇಜಿನ ಸಮೀಪ ಸಿಕ್ಕಿದ್ದು ಅವುಗಳನ್ನು ಪ್ರಾಂಶುಪಾಲರಿಗೆ ತಂದುಕೊಟ್ಟು ವಾರಸುದಾರರಿಗೆ ತಲುಪಿಸುವಲ್ಲಿ ಮಾನವೀಯತೆಯನ್ನು ತೋರಿದ್ದಾಳೆ. ವಾರಸುದಾರರಾದ ಚಂದ್ರು ಹಾಗೂ ಸಂಗಡಿಗರು ವಿದ್ಯಾರ್ಥಿನಿಯನ್ನು ಪ್ರಶಂಸಿಸಿ ಸನ್ಮಾನಿಸಿದರು.

ವಿದ್ಯಾಭ್ಯಾಸದ ಕಾಲದಲ್ಲೇ ಇಂತಹ ಮನೋಭಾವ ಇರುವುದು ನಿಜಕ್ಕೂ ಶ್ಲಾಘನೀಯ. ಪದ್ಮಲಕ್ಷ್ಮೀಗೆ ಒಳ್ಳೆಯ ವಿದ್ಯಾಭ್ಯಾಸ ದೊರೆತು ಅವಳ ಜೀವನ ಸುಖಕರವಾಗಿರಲೆಂದು ಮವಿ ಬಳಗ ಶುಭ ಕೋರಿ ಅವರಿಗೊಂದು ಸಲಾಮ್ ಸಲ್ಲಿಸಿದೆ.

### ಅಕಾಡೆಮಿ ಪ್ರಶಸ್ತಿ ವಾಪಸ್ಸು



ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಮಲಯಾಳಿ ಕಾದಂಬರಿಗಾರ್ತಿ ಸಾರಾ ಜೋಸೆಫ್‌ಗೆ ನೀಡಿದ್ದನ್ನು ಅವರು ಹಿಂದಿರುಗಿಸುವುದಾಗಿ ತಿಳಿಸಿದ್ದಾರೆ. ಇತ್ತೀಚೆಗೆ ಭಾರತದಲ್ಲಿ ಕೋಮು ಹಿಂಸಾಚಾರಗಳು ಹೆಚ್ಚಾಗುತ್ತಿರುವುದೇ ಪ್ರಶಸ್ತಿ ಹಿಂದಿರುಗಿಸಲು ಕಾರಣ ಎಂದು ತಿಳಿಸಿದ್ದಾರೆ.

### ಪರೂಲ್ ಗುಪ್ತಾಗೆ ಪದಕ



ತೈವಾನ್‌ನಲ್ಲಿ ಇತ್ತೀಚಿಗೆ ನಡೆದ ಏಷ್ಯಾ ಫೆಸಿಫಿಕ್ ಕಿವುಡರ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆದ್ದು ಭಾರತದ ಪರೂಲ್ ಗುಪ್ತಾ ತಮ್ಮ ಪದಕ ಪ್ರಶಸ್ತಿ ಪತ್ರವನ್ನು ತೋರಿಸುತ್ತಿರುವುದು ಹೀಗೆ ?

**ಮೇಲ್ ವಿಳಾಸ**

ಇದು ನಿಮ್ಮ ನೆಚ್ಚಿನ ಪತ್ರಿಕೆ. ಪ್ರಕಟಿಸಬಹುದಾದ ಸುದ್ದಿ, ಮಾಹಿತಿ, ಫೋಟೋಗಳಿದ್ದರೆ ಮೈಲ್ ಮಾಡಿ.
www.mahilavishesha@yahoo.com

- ಸಂಪಾದಕರು

### ಮಹಿಳೆಯರ ಏಳ್ಗೆಯೇ ಗುರಿ

ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಜೀವಿನಿ ಸಂಸ್ಥೆಯ ಗುರಿ ಮಹಿಳೆಯರ ಏಳ್ಗೇಯೋ ಎಂದು ನಂಜನಗೂಡು ತಾಲ್ಲೂಕು ಮುದ್ದನಹಳ್ಳಿ ಗ್ರಾಮದಲ್ಲಿ ನಡೆದ ಮಹಿಳಾ ಸ್ವಸಹಾಯ ಸಂಘಗಳ ವಾರ್ಡ್ ಮಟ್ಟದ ಒಕ್ಕೂಟಗಳ ರಚನಾ ಕಾರ್ಯಕ್ರಮದ ಉದ್ಘಾಟನಾ ಸಮಯದಲ್ಲಿ ಸ್ವ ಸಹಾಯ ಸಂಘಗಳ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಿ ಎಂದು ಸಂಸ್ಥೆಯು ತಿಳಿಸಿತು.

### ಜೀ ಕುಟುಂಬ ಅವಾರ್ಡ್ಸ್

ಇದೇ ತಿಂಗಳ 18 ರಂದು ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಜೀ ಅವಾರ್ಡ್ ಕಾರ್ಯಕ್ರಮ ಜೀ ಟಿವಿ ವತಿಯಿಂದ ಹಮ್ಮಿಕೊಂಡಿದೆ. ಐದು ಜನಪ್ರಿಯ ಪ್ರಶಸ್ತಿಗಳನ್ನು ಜನರೇ ಆಯ್ಕೆ ಮಾಡಬೇಕಿದೆ. ಅದಕ್ಕಾಗಿ ಜೀ ವಾಹಿನಿಯ ಅಭಿಮಾನಿ ಎಕ್ಸ್‌ಪ್ರೆಸ್ ಮಂಡ್ಯದಿಂದ ಹೊರಟಿದ್ದು ಮೈಸೂರು, ಮಂಗಳೂರು, ಹಾಸನ, ಹುಬ್ಬಳ್ಳಿ, ದಾರವಾಡ ಮುಂತಾದ ನಗರಗಳಲ್ಲಿ ಸಂಚರಿಸಿ ಜನಮತವನ್ನು ಸಂಗ್ರಹಿಸುವ ಕಾರ್ಯ ನಡೆಯುತ್ತಿದೆ. ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಲು ಗಣ್ಯರುಗಳಿದ್ದು ಕಾರ್ಯಕ್ರಮ ವಿಜೃಂಭಣೆಯಿಂದ ಕೂಡಿರುತ್ತದೆ ಹಾಗೂ ಹಲವಾರು ಅವಾರ್ಡ್‌ಗಳನ್ನು ವಿತರಿಸಲಾಗುವುದೆಂದು ವಾಹಿನಿಯ ಮುಖ್ಯಸ್ಥ ರಾಘವೇಂದ್ರ ಹುಣಸೂರ್ ತಿಳಿಸಿದ್ದಾರೆ. ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಯಾಗಲಿ ಎಂಬ ಮವಿ ಬಳಗ ಶುಭ ಕೋರಿದೆ.

### ಮಹಿಳಾ ಉದ್ಯೋಗಿಗಳ ರಕ್ಷಣೆ

ಬೆಂಗಳೂರಿನಲ್ಲಿ ಮಹಿಳೆಯರಿಗೆ ಕೆಲಸ ನೀಡಿರುವ ಕಂಪನಿಗಳು ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಮಹಿಳಾ ಉದ್ಯೋಗಿಗಳಿಗೆ ರಕ್ಷಣೆ ಹಾಗೂ ಸಾರಿಗೆ ಸೌಲಭ್ಯವನ್ನು ನೀಡಬೇಕು. ಇಲ್ಲವಾದಲ್ಲಿ ಅಂತಹ ಕಂಪನಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುತ್ತದೆಂದು ಗೃಹ ಸಚಿವರು ಎಚ್ಚರಿಕೆ ನೀಡಿದ್ದಾರೆ.

### ನವರಾತ್ರಿ ಹಬ್ಬದ ಶುಭಾಶಯಗಳು

ನಮ್ಮ ಪತ್ರಿಕೆಯ ಓದುಗರಿಗೆ, ಜಾಹೀರಾತುದಾರರಿಗೆ, ಹಿತೈಷಿಗಳಿಗೆ, ಸ್ನೇಹಿತರುಗಳಿಗೆ, ನಗರದ ಹಾಗೂ ನಾಡಿನ ಸಮಸ್ತ ಮಹಿಳಾ ಮತ್ತು ಪುರುಷ ನಾಗರೀಕರುಗಳಿಗೆ, ನವರಾತ್ರಿ / ದಸರಾ ಹಬ್ಬದ ಶುಭಾಶಯಗಳು. ನಿಮ್ಮೆಲ್ಲರಿಗೂ ಹೆಚ್ಚಿನ ಆಯುರಾರೋಗ್ಯ, ಐಶ್ವರ್ಯವನ್ನು ಮಾತೆ ಚಾಮುಂಡೇಶ್ವರಿ ದೇವಿಯು ನೀಡಲಿ.

- ಸಂಪಾದಕರು

### ಬದುಕೇ ಹೀಗೆ !

**"ಬೆಳಕಿನಲ್ಲಿ ಬೆಳಕಿಗೆ ಬೆಲೆಯಿಲ್ಲ; ಆದರೆ ಕತ್ತಲೆಯಲ್ಲಿ ಕಿರುದೀಪಕ್ಕೂ ಹಿರಿದಾದ ಬೆಲೆಯುಂಟು" - ಅನಾಮಿಕ**

### ನಡೆ - ನುಡಿ

"ಅನ್ಯ ವ್ಯಕ್ತಿಯ ಆತ್ಮಾಭಿಮಾನವನ್ನು ಅಣಕಿಸುವಂತಹ ಮಾತುಗಳನ್ನಾಡದಿರಿ."

### ಒಗಟು

ಖಾಕಿ ಬಟ್ಟೆ ಹಾಕಿದರೂ ಪೊಲೀಸಲ್ಲ, ಕೈಯಲ್ಲಿ ಚಕ್ರವುಂಟು ಕೃಷ್ಣನಲ್ಲ, ಊರೂರು ತಿರುಗಿದರೂ ನಾರದನಲ್ಲ ಹಾಗಾದರೆ ನಾನ್ಯಾರು ?

**ಉತ್ತರ : ಡ್ರೈವರ್**

- ಸುನಂದ, ಬೆಂಗಳೂರು

### ಹೇಗಿರಬೇಕು?

"ನಮ್ಮ ಮಕ್ಕಳು ಅವರ ಮಕ್ಕಳು ಎಂಬ ಹೋಲಿಕೆಯನ್ನೊಳಗೊಂಡ ವಿಶ್ಲೇಷಣೆ ಮಾಡಲೇಬಾರದು."

ಪ್ರೇಮ, ಮೈಸೂರು

### ಪ್ರಶ್ನೋತ್ತರ

ಪ್ರ: ಪಾಟಲೀಪುತ್ರ ಯಾವ ಸಾಮ್ರಾಜ್ಯದ ರಾಜಧಾನಿ?
ಉ: ಮೌರ್ಯ ಸಾಮ್ರಾಜ್ಯ
ಪ್ರ: ಫ್ರಾನ್ಸ್ ದೇಶದ ರಾಜಧಾನಿ ಯಾವುದು?
ಉ: ಪ್ಯಾರಿಸ್
ಪ್ರ: ಐರ್ಲೆಂಡ್‌ನಲ್ಲಿ ಉಪಯೋಗಿಸುವ ಕರೆನ್ಸಿ ಹೆಸರೇನು?
ಉ : ಐರಿಶ್ ಪೌಂಡ್

### ಜನರೇಷನ್ ಗ್ಯಾಪ್

**ಇಂದಿನ ತಲೆಮಾರು :**

1. ಹೆಚ್ಚಿನ ಸುಖ- ಸೌಲಭ್ಯಗಳನ್ನು ಪಡೆದವರು.
2. ಹಿಂದಿನವರು ಗೊಡ್ಡು ಸಂಪ್ರದಾಯ ವಾದಿಗಳೆಂದು ಹೇಳುವುದರ ಜೊತೆಗೆ, ಹಳೆಯ ಪದ್ದತಿಗಳನ್ನು ತೊಡೆದು ಹಾಕಬೇಕೆಂಬ ಮನೋಪ್ರವೃತ್ತಿ ಉಳ್ಳವರು.
3. ಎಳೆ ವಯಸ್ಸಿನ ಕಾರಣದಿಂದ ಅನುಭವಗಳ ಕೊರತೆಯಿಂದ ಪ್ರಬುದ್ಧತೆ ಇಲ್ಲದವರು.
4. ಅವಸರ, ಹುಮ್ಮಸ್ಸು, ಹೊಸತನದತ್ತ ನಡೆಯುವ ಹಂಬಲ, ಮುನ್ನುಗ್ಗುವ ಪ್ರವೃತ್ತಿ ಉಳ್ಳವರು.

**..... ಮುಂದುವರಿಯುವುದು**

### ಸ್ವಲ್ಪ ನಗ್ತೀರಾ ಪ್ಲೀಸ್....?

ನಲವತ್ತು ವರ್ಷಗಳ ಹಿಂದೆ ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿದ ದಿನಗಳಲ್ಲಿ ಮಹನೀಯರೊಬ್ಬರು ವಿದೇಶಿ ಸಿಗರೇಟೊಂದನ್ನು ಸೇದುತ್ತಿದ್ದನ್ನು ಕಂಡು ಅವರ ಆತ್ಮೀಯರೊಬ್ಬರು ಏನ್ ಸ್ವಾಮಿ ನಾವೆಲ್ಲಾ ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿ ಸುಡ್ತಾ ಇದೀವಿ, ಆದ್ರೆ ನೀವು ಏನ್ ಮಾಡ್ತಾ ಇದ್ದೀರಾ? ಎಂದು ಕೇಳಿದ್ದಕ್ಕೆ ಅವರು ನಾನೂನು ಅದನ್ನೇ ಮಾಡ್ತಾ ಇದ್ದೀನಿ ಅಂತ ನಗ್ತಾ ನಗ್ತಾ ಅಂದರಂತೆ.

**ಪರಿಮಳ, ಮಂಡ್ಯ**



ಮೆಹಂದಿಯನ್ನು ವಿದ್ಯಾರ್ಥಿನಿಯರು ಕೈಗೆ ಹಚ್ಚಿಕೊಂಡು ಪ್ರದರ್ಶಿಸುತ್ತಿರುವುದು



ಮಹಿಳೆಯರ ನೃತ್ಯದ ಒಂದು ಭಂಗಿ

### ಪದಗಳನ್ನು ಓದಿ ಮುಂದುವರಿಸಿ...

| | | | |
|---|---|---|---|
| ನೀರು | ಆರು | ಇರು | ಊರು |
| ಏರು | ಕಾರು | ಜಾರು | ಟಾರು |
| ನಾರು | ಪಾರು | ಬಾರು | ಮಾರು |
| ಯಾರು | ಸೇರು | ಹಾರು | ಗೀರು |

*****

| | | | |
|---|---|---|---|
| ಆಡು | ಇಡು | ಉಡು | ನಾಡು |
| ಓಡು | ಕಾಡು | ಜಾಡು | ಲಾಡು |
| ಪಾಡು | ಬಾಡು | ಮಾಡು | ಹಾಡು |

*****

| | | | |
|---|---|---|---|
| ಅಂದ | ಇಂದ | ಎಂದ | ಮಂದ |
| ಕಂದ | ನಂದ | ಚೆಂದ | ತಿಂದ |
| ತಂದ | ಗಂದ | ಬಂದ | ನಿಂದ |

**- ಮಂಗಳಾ, ಮೈಸೂರು**

### MISTAKES

If a **Scientist** makes a mistakes, it is a new **invention**

If a **politician** makes a mistakes, it is a **new law**

If a **teacher** makes a mistakes, it is a **new theory**

If a **barber** makes a mistakes, it is a **new hair style**

If a **Civil Engr.**makes a mistakes, it is a new **Architectural** marvel

If a **child** makes mistakes, it **stays as a mistake.**

**- Shalini Bengaluru**



ಹೂತೋಟದ ಅಂದದ ಚಿತ್ರ




ಮಿಸೆಸ್ ಇಂಡಿಯಾ ತಂಗಾಳಿಯ ಒಂದು ನೋಟ



ವಿದ್ಯಾರ್ಥಿನಿಯರು ಕಂಪ್ಯೂಟರ್‌ನ ವೀಕ್ಷಣೆಯಲ್ಲಿರುವುದು.

### ಸುಂಸುಂನೆ

**ಎಸ್.ಎಸ್.ಎಲ್.ಸಿ.**

ಸತೀಶ, ಗಿರೀಶ ಸ್ನೇಹಿತರಿಬ್ಬರೂ ಒಂದು ದಿನ ಬಹಳ ಬೇಜಾರಿನಲ್ಲಿದ್ದಾಗ ಸತೀಶ ಎಸ್‌ಎಸ್‌ಎಲ್‌ಸಿ ಇದರ ಪೂರ್ಣ ವಿಸ್ತಾರ ರೂಪ ಏನು ಎಂದು ಸ್ನೇಹಿತನನ್ನು ಕೇಳಿದ. ಬಹಳವಾಗಿ ಯೋಚಿಸಿ ಎಸ್‌ಎಸ್‌ಎಲ್‌ಸಿ ಎಂದರೆ 'ಸುಂದರ ಸುಂದರಿಯರ ಲೌಲಿ ಕ್ಲಾಸ್'ಅಂತಾ ಗಿರೀಶ ವಿಸ್ತರಿಸಿದ. ಕೊನೆಗೆ ಇಬ್ಬರೂ ನಕ್ಕಿ ನಂತರ ಅಲ್ಲಿಂದ ಜಾಗ ಖಾಲಿ ಮಾಡಿದರು.

**ಸುಶೀಲಾ, ನಂಜನಗೂಡು**

**ಈ ಪತ್ರಿಕೆಯನ್ನು ಓದಿ ನಿಮ್ಮಲ್ಲಿರುವ ಮಾಹಿತಿಗಳನ್ನು ನೀಡಿ ಪತ್ರಿಕೆಯನ್ನು ಬೆಳೆಸಿ.**

ಈ ಜಾಗ ಓದುಗರಿಗಾಗಿ ಸ್ವಂತ ನಗೆಹನಿ, ಬರಹ, ಚುಟುಕು, ಕವನ ಇತ್ಯಾದಿಗಳನ್ನು ಪ್ರಕಟಿಸಲು ಕಳುಹಿಸಿಕೊಡಿ. ಪ್ರಕಟಿಸಲು ಕೆಲವು ಮಾನದಂಡಗಳನ್ನು ಅಳವಡಿಸ ಲಾಗಿದೆ. ಪ್ರಕಟಿಸುವ ವಿಚಾರ ಪತ್ರಿಕೆಯ ಮಂಡಳಿಕೆ ಸೇರಿದ್ದಾಗಿರುತ್ತದೆ.

## ನೇಮಕಾತಿ ಅಂಕಣ

### ಅರ್ಜಿ ಆಹ್ವಾನ

**ಪ್ರಚಾರ ಭಾರತಿ ದೂರದರ್ಶನ ಕೇಂದ್ರ**

ಬೆಂಗಳೂರಿನ ಪ್ರಸಾರ ಭಾರತಿ ದೂರದರ್ಶನ ಕೇಂದ್ರದ ಪ್ರಾದೇಶಿಕ ಸುದ್ದಿ ವಿಭಾಗದಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ನಿಗದಿತ ನಮೂನೆಯಲ್ಲೇ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತೆ. ಹೆಚ್ಚಿನ ಮಾಹಿತಿಗಾಗಿ ದೂ. 080-23439377/23333201-206ಕ್ಕೆ ಸಂಪರ್ಕಿಸಿ ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 26-10-2015

**ಐಟಿಬಿಪಿಎಫ್‌ನಲ್ಲಿ ಇನ್ಸ್‌ಪೆಕ್ಟರ್**

ಇಂಡೋ- ಟಿಬೇಟಿಯನ್ ಬಾರ್ಡರ್ ಪೊಲೀಸ್ ಫೋರ್ಸ್‌ನಲ್ಲಿ ಗ್ರೂಪ್-ಬಿ ಹುದ್ದೆಗೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಲು ಅರ್ಹ ಅಭ್ಯರ್ಥಿಗಳು www.itbpolice.nic.in ವೆಬ್‌ಸೈಟ್ ನೋಡಿ ಹಾಗೂ ಅರ್ಜಿ ನಮೂನೆಯನ್ನು ಪಡೆದುಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ 23-10-2015.

**ಭಾಷಾ ಅಲ್ಪಸಂಖ್ಯಾತರ ಆಯೋಗ**

ಆಯುಕ್ತರು, ಭಾಷಾ ಅಲ್ಪಸಂಖ್ಯಾತರ ಆಯೋಗ, ನವದೆಹಲಿ ವತಿಯಿಂದ ವಿವಿಧ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಕರೆಯಲಾಗಿದೆ. ಹೆಚ್ಚಿನ ಮಾಹಿತಿಗೆ www.nclm.nic.in ನೋಡಿ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 18-11-2015

**ಕಾರ್ಮಿಕರ ರಾಜ್ಯ ವಿಮಾ ನಿಗಮ**

ESICಬೆಂಗಳೂರು ವತಿಯಿಂದ ವಿವಿಧ ಹುದ್ದೆಗಳಿಗೆ ವಿಕಲ ಚೇತನ ಅಭ್ಯರ್ಥಿಗಳಿಂದ ಅರ್ಜಿ ಕರೆಯಲಾಗಿದೆ. ಹೆಚ್ಚಿನ ಮಾಹಿತಿಯನ್ನುwww. esickar.gov.in ನೋಡಿ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 31-10-2015.

**ತಾತ್ಕಾಲಿಕ ಹುದ್ದೆಗಳಿಗೆ ಅರ್ಜಿ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಉತ್ತರ ತಾಲ್ಲೂಕು ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಖಾಲಿ ಇರುವ ಅಂಗನವಾಡಿ ಕೇಂದ್ರಗಳಿಗೆ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಖಾಲಿ ಇರುವ ಹುದ್ದೆಗಳನ್ನು ತಾತ್ಕಾಲಿಕವಾಗಿ ಭರ್ತಿ ಮಾಡಲು ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು 13-10-15 ರಂದು ಕೊನೆಯ ದಿವಸವಾಗಿದ್ದು ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ಯಲಹಂಕ ಉಪನಗರ ಕಛೇರಿ, ಬೆಂಗಳೂರು - 64 ದೂರವಾಣಿ : 080-28462513ಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದೆ.

ಇ ಮೇಲ್ ವಿಳಾಸ
**www.mahilavishesha@yahoo.com**
**Mob : 9379777793**

**ಇದು ನಿಮ್ಮ ಮಹಿಳಾ ಪತ್ರಿಕೆ. ಪ್ರೋತ್ಸಾಹಿಸಿ, ಬೆಳೆಸಿ.**



## ಪುಟಾಣಿ - ಬಟಾಣಿ



### ಮಾವಿನ ಮರದ ಸಾಕ್ಷಿ

ಒಂದು ಸಾಲ ಬ್ರಾಹ್ಮಣನೊಬ್ಬನು ಅಳುತ್ತಾ ಅಕ್ಬರನ ಆಸ್ಥಾನಕ್ಕೆ ಬಂದ. "ಎಲ್ಲೈ ಪ್ರಭುವೇ, ನನ್ನ ಸಂಪತ್ತು ದೋಚಿ ಹೋಯಿತು. ಇನ್ನು ಹೇಗೆ ನಾನು ಜೀವನ ಸಾಗಿಸಲಿ? "ಎಂದಾಗ ಅಕ್ಬರನು ಅವನನ್ನು ಸಮಾಧಾನ ಮಾಡುತ್ತಾ, ಎಲ್ಲೈ ಬ್ರಾಹ್ಮಣನೇ ಶಾಂತನಾಗಿ ನಿನ್ನ ಕಷ್ಟೇವೇನೆಂದು ತಿಳಿಸು ಎಂದ. ಅವನು ಕಣ್ಣೀರು ಒರೆಸಿಕೊಳ್ಳುತ್ತಾ ಹೇಳಿದ ಸ್ವಾಮಿ ನಾನು ಪರ ಊರಿನಲ್ಲಿರುವ ನನ್ನ ಅಳಿಯನ ಆರೋಗ್ಯ ವಿಚಾರಿಸಿಕೊಂಡು ಬರಲು ಹದಿನೈದು ದಿನಗಳವರೆಗೆ ಹೋಗಬೇಕಾಯಿತು.

ನನ್ನ ಬಳಿಯಿದ್ದ ಮೂರು ಸಾವಿರ ಚಿನ್ನದ ವರಹಗಳನ್ನು ಭದ್ರವಾಗಿಡಲು ಪರಿಚಯದವನಾದ ಆಸ್ಥಾನಿಕ ಅಭೇಸಿಂಹನ ಕೈಯಲ್ಲಿ ಕೊಟ್ಟು ಹೋದೆ. ಏಕೆಂದರೆ ನಾನಿಲ್ಲದಾಗ ಕಳ್ಳತನವಾಗುವುದೆಂಬ ಭಯ. ಊರಿಗೆ ಹಿಂತಿರುಗಿ ಬಂದು ಅಭೇಸಿಂಹನನ್ನು ವರಹಗಳನ್ನು ವಾಪಸ್ಸು ಕೊಡುವಂತೆ ಕೇಳಿದಾಗ, ಆತನು ನನ್ನನ್ನು ಗದರಿಸುತ್ತಾ "ಎಲ್ಲಿಯ ಹಣ? ಯಾವ ವರಹ? ಏನು ನೀನು ಮಾತಾಡುತ್ತಿರುವೆ? ನೀನು ಎಲ್ಲಾದರೂ ಹಣದ ಚೀಲವನ್ನು ನನಗೆ ಕೊಡುತ್ತಿದ್ದೆಯಾ? ನನ್ನ ಮೇಲೆ ತಪ್ಪು ಆರೋಪವನ್ನು ಹಾಕುತ್ತಿದ್ದೀಯಾ? "ಎಂದು ಹೇಳಿದ. ಆ ಮಾತನ್ನು ಕೇಳಿದ ಅಕ್ಬರ್ ನೀನು ಆತನಿಗೆ ವರಹವನ್ನು ಕೊಟ್ಟಾಗ ಯಾರಾದರೂ ಸಾಕ್ಷಿ ಇದ್ದರೇ? ಎಂದ. ಬ್ರಾಹ್ಮಣ ದಿಕ್ಕು ಕಾಣದಂತಾದವನಾದ ಸ್ವಾಮಿ ನಾನು ವರಾಹಗಳನ್ನು ಆತನಿಗೆ ಕೊಟ್ಟಾಗ ಆತ ಒಂದು ಮರದಡಿ ಕುಳಿತಿದ್ದ. ಎದುರುಗಡೆ ಒಂದು ಹಸು ಮಲಗಿತ್ತು. ಆವೆರಡೇ ಸಾಕ್ಷಿಗಳು. ಅವನ್ನು ಹೇಗೆ ತಾನೇ ಸಾಕ್ಷಿಗಳೆಂದು ಹೇಳಲಿ! ಆಷ್ಟೇ ಸ್ವಾಮಿ ಬೇರಾರೂ ಅಲ್ಲಿರಲಿಲ್ಲ ಎಂದು ಹೇಳಿದ.

.....ಮುಂದುವರೆಯುವುದು

- ಮಾಲಾ, ಬೆಂಗಳೂರು

## ಫೋಟೋ ನೋಡಿ ಆನಂದಿಸಿ





## ಮಾನಸಿಕ ಒತ್ತಡಕ್ಕೆ ವೈಜ್ಞಾನಿಕ ಪರಿಹಾರ

**ಮಾನಸಿಕ ಒತ್ತಡಗಳು ಎಂದರೇನು ?**

ಸಂಶೋಧನೆಗಳು ಈ ದಿಕ್ಕಿನಲ್ಲಿ ನಡೆದಿದ್ದು ನಗರ ವಾಸಿಗರ ಉದ್ಯೋಗಸ್ತರ, ವೃತ್ತಿಪರರ ಜೀವನ ಶೈಲಿಯ ವೈಪರೀತ್ಯವನ್ನು ಅರ್ಥ ಮಾಡಿಕೊಡುವಲ್ಲಿ ಸಹಾಯವಾಗಿದೆ. ಮನೋ ವಿಶ್ಲೇಷಣೆ ಸಿದ್ಧಾಂತಿ ಫ್ರಾಯ್ಡ್ ಹೇಳುವಂತೆ "ನಮ್ಮ ಅಂತರಿಕ ಮನಸ್ಸಿನಲ್ಲಿ ಆಗುವ ಹೊಯ್ದಾಟವು ಅನೇಕ ಒತ್ತಡಗಳಿಗೆ ಕಾರಣವಾಗುತ್ತದೆ".

ಸರಿಯಾದ ಮಾನಸಿಕ ಆರೋಗ್ಯವೆಂದರೆ ವ್ಯಕ್ತಿಯು ಆರಾಮದ ಭಾವನೆಯನ್ನು ತನ್ನಲ್ಲಿ ಹೊಂದುವುದು ಹಾಗೂ ಇತರರ ಬಗ್ಗೆ ಸರಿಯಾದ ಭಾವನೆಗಳು ಇರುವುದು ಜೀವನದಲ್ಲಿ ಎದುರಿಸಬೇಕಾಗಿದೆ.ಶಕ್ತಿ ಸಾಮರ್ಥ್ಯಗಳನ್ನು ಹೊಂದುವುದು ಮಾನಸಿಕ ಒತ್ತಡ, ಬಿಗಿತ, ಸೆಳೆತಗಳು ನಮ್ಮ ಹೆಚ್ಚಿನ ಶಕ್ತಿಯನ್ನು ಬಯಸುತ್ತಾ ಒಂದು ರೀತಿಯ ಬಿಗಿತದ ಅನುಭಾವಕ್ಕೆ ಹಾದಿ ಮಾಡುತ್ತದೆ. ಗಡಿಬಿಡಿ ಗಾಬರಿ, ಆತಂಕ, ಕಳವಳದ ಭಾವನೆಗಳು ವ್ಯಕ್ತಿಯ ವಿರಾಮ ಭಾವನೆಗೆ ಅಡ್ಡಿ ಆಗುತ್ತವೆ.

ಸುಮಾರು ಐದು ದಶಕಗಳಿಗೂ ಮೀರಿ ಮುಂದೋಡುತ್ತಿರುವ ಈ ಒತ್ತಡದ ಸಮಸ್ಯೆ ಆಧುನಿಕತೆಯಿಂದ ಹೆಚ್ಚಾಗುತ್ತಿವೆ. ಆದರೆ ಈ ಒತ್ತಡಗಳನ್ನು ಎದುರಿಸುವ ಬಗ್ಗೆ ತಲೆ ಕೆಡಿಸಿಕೊಂಡಿರುವುದು ಸುಮಾರು ಎರಡು ದಶಕಗಳಿಂದ ಈಚೆಗೆ.

...... ಮುಂದುವರೆಯುವುದು.

## ನಮ್ಮ ಮಕ್ಕಳು

ಆರ್. ವಿಶಾಲಾಕ್ಷಿ ಗುಂಡೂರಾವ್
ನಿವೃತ್ತ ಶಿಕ್ಷಕಿ, ಮೈಸೂರು

ಎರಡನೆಯದಾಗಿ ಗಂಡ- ಹೆಂಡಿರಿಬ್ಬರೂ ಹೊರಗೆ ಹೋಗುವ ಹಾಗಿದ್ದರೆ ಇಬ್ಬರಲ್ಲೊಬ್ಬರಾದರೂ ಬೆಳಗಿನಿಂದ ತಡ ರಾತ್ರಿಯವರೆಗೂ ಹೋಗದೆ ಆದಷ್ಟು ಬೇಗ ಮನೆಗೆ ಬಂದು ಮಗುವಿನ ಸಂಗಡ ಕಾಲ ಕಳೆಯುವಂತಿರಬೇಕು. ಹಾಗಿಲ್ಲದೆ ಆಯಾಗಳ ಜೊತೆ ಮಗುವನ್ನು ಬಿಟ್ಟರೆ ಆ ಮಗುವಿಗೆ ತಂದೆ - ತಾಯಿಯ ಪ್ರೀತಿಯ ಸುಖ- ಬೆಲೆ ತಿಳಿಯುವುದೇ ಇಲ್ಲ. ಆಯಾ ವಾತ್ಸಲ್ಯಮಯಿ ಆಗಿರದಿದ್ದಲ್ಲಿ, ಆ ಮಗುವಿನ ಮನಸ್ಸು ಸೇಡು- ಕ್ರೌರ್ಯದಿಂದ ತುಂಬಿಹೋಗಿ ಮುಂದೆ ಸಮಾಜದಲ್ಲಿ ಆ ಮಗು ಬಾಲಾಪರಾಧಿಯಾದರೆ ಆಶ್ಚರ್ಯವಿಲ್ಲ.

ಗಂಡನಿಗೆ ಸಾಕಷ್ಟು ಆದಾಯ ಇದ್ದಲ್ಲಿ ಹೆಂಡತಿ ಮಗುವನ್ನು ಬಿಟ್ಟು ಹೋಗದಿರುವುದೇ ಸರಿಯಾದ ಕ್ರಮ. ಹೆಣ್ಣೊಬ್ಬಳು ಮನೆಯಲ್ಲಿದ್ದರೆ ಮನೆ - ಮಕ್ಕಳು ಸಂಸಾರ ಎಲ್ಲವೂ ಸುಗಮವಾಗಿ ಸಾಗುತ್ತಿರುತ್ತದೆ. ಹೆಣ್ಣಾಗಲೀ ಗಂಡಾಗಲೀ ಈ ದಿನಗಳಲ್ಲಿ ಎರಡೂ ಒಂದೇ ಎಂಬ ಭಾವನೆ ಜನರಲ್ಲಿ ಮೂಡುತ್ತಿದೆ. ಯಾವುದೇ ಮಗುವಾಗಲಿ ಅದರ ಬರುವಿಕೆ ಸಂಭ್ರಮವೇ ಸರಿ. ಇತ್ತೀಚೆಗೆ ಶ್ರೀಮಂತರಷ್ಟೇ ಅಲ್ಲ, ಕೂಲಿನಾಲಿ ಮಾಡುವವರೂ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಲು ಮುಂದಾಗುತ್ತಿದ್ದಾರೆ. ಇಷ್ಟೆಲ್ಲ ಇದ್ದರೂ ಮಕ್ಕಳು ನಾವಂದುಕೊಂಡಂತೆ ಬೆಳೆಯುತ್ತಿಲ್ಲ! ಏಕೆ ? ಈ ಪ್ರಶ್ನೆ ಎಲ್ಲರನ್ನು ಕಾಡುತ್ತಿದೆ. ಇದಕ್ಕಾಗಿ ಶಿಕ್ಷಣ ತಜ್ಞರು, ಮನೋ ವಿಜ್ಞಾನಿಗಳು ಸಮಾಜ ಸುಧಾರಕರು ಎಲ್ಲರೂ ಸಂಶೋಧನೆ ನಡೆಸುತ್ತಲೇ ಇದ್ದಾರೆ. ಆದರೆ ಸರಿಯಾದ ಕಾರಣ ಇನ್ನೂ ಕಂಡಿಲ್ಲ. ಏಕೆ ? ಮಕ್ಕಳ ಸುತ್ತ ಸಮಸ್ಯೆಯ ಸರಮಾಲೆಗಳೇ ಸುತ್ತುತ್ತಿವೆ. ಆಧುನಿಕತೆಯ ಸಂಶೋಧನೆಗಳು, ಉಪಕರಣಗಳು ಎಳೆಯ ಮಕ್ಕಳಿಂದ ಮೊದಲುಗೊಂಡು ಹದಿಹರೆಯದವರನ್ನು ತನ್ನತ್ತ- ಸೂಜಿಗಲ್ಲಿನಂತೆ ಆಕರ್ಷಿಸುತ್ತಿದೆ. ಇದು ಯಾವ ಮಟ್ಟಕ್ಕೆ ತಲುಪಿದೆ ಎಂಬುದನ್ನು ಊಹಿಸಲೂ ಭಯವಾಗುತ್ತದೆ. ಎರಡು ವರ್ಷದ ಮಗುವಿನ ಕೈಲಿ ಸಹ ಮೊಬೈಲ್ ಇರುವುದಲ್ಲದೆ ತಮಗೂ ಆ ಮೊಬೈಲನ್ನು ಉಪಯೋಗಿಸುವ ರೀತಿ ಸಹ ನೋಡುತ್ತಿದ್ದರೆ ಆಶ್ಚರ್ಯ - ಭಯ ಒಮ್ಮೆಲೇ ಆಗುತ್ತದೆ.

...... ಮುಂದುವರೆಯುವುದು.

### ಟಿ.ಎ. ಜೆನಿಫರ್‌ಗೆ ಡಾಕ್ಟರೇಟ್

ಡಾ. ಕೆ. ಮಂಟೇಲಿಂಗು ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿದ ಟಿ.ಎ. ಜೆನಿಫರ್ ಅವರು ಮಂಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಅಂಗೀಕರಿಸಿ ರಸಾಯನ ಶಾಸ್ತ್ರ ವಿಷಯದಲ್ಲಿ ಪಿಹೆಚ್‌ಡಿ ಪದವಿ ನೀಡಿದೆ.

## ಮಹಿಳಾ ವಿಶೇಷ ಕನ್ನಡ ವಾರಪತ್ರಿಕೆ

**ಮೈಸೂರು ಕಛೇರಿ :** ಸಂಖ್ಯೆ 1021, 14 ನೇ ಕ್ರಾಸ್ 2 ನೇ ಹಂತ,
ಹೆಬ್ಬಾಳು, ಮೈಸೂರು - 570 017

ಮಾನ್ಯರೇ,

ಮಹಿಳಾ ವಿಶೇಷ ಪತ್ರಿಕೆಯ 1ವರ್ಷ/ 2 ವರ್ಷ/ 3 ವರ್ಷಯ / 5 ವರ್ಷ/ ಅಜೀವ/ ಪೋಷಕ / ಮಹಾ ಪೋಷಕ ಚಂದಾದಾರರಾಗಲು ರೂ................................ ಬ್ಯಾಂಕ್ ಡಿಡಿ ಚೆಕ್ / ಎಂ. ಓ. ಕಳುಹಿಸುತ್ತಿದ್ದೇನೆ. ನನಗೆ ಪ್ರತಿವಾರವೂ ಪತ್ರಿಕೆಯನ್ನು ನನ್ನ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿ.

ದಿನಾಂಕ : ಸಹಿ :

### ಚಂದಾ ವಿವರ

ವಾರ್ಷಿಕ ಪತ್ರಿಕೆಗೆ ಚಂದಾ, ಅಂಚೆ ವೆಚ್ಚಕ್ಕಾಗಿ ಹಾಗೂ ಪತ್ರಿಕೆಯ ಅಭಿವೃದ್ಧಿ ಹಾಗೂ ಏಳಿಗೆಗಾಗಿ ಈ ಕೆಳಕಂಡಂತೆ ಚಂದಾ ಹಣವನ್ನು ನಿಗದಿಪಡಿಸಲಾಗಿದೆ.

| | | | |
|---|---|---|---|
| **1 ವರ್ಷಕ್ಕೆ** | ...... | ರೂ. | **501/-** |
| **2 ವರ್ಷಕ್ಕೆ** | ...... | ರೂ. | **1,001/-** |
| **3 ವರ್ಷಕ್ಕೆ** | ...... | ರೂ. | **1,501/-** |
| **5 ವರ್ಷಕ್ಕೆ** | ...... | ರೂ. | **2,501/-** |
| **ಆ ಜೀವ ಸದಸ್ಯತ್ವಕ್ಕೆ** | ...... | ರೂ. | **5,001/-** |
| **ಪೋಷಕ ಸದಸ್ಯತ್ವಕ್ಕೆ** | ...... | ರೂ. | **10,001/-** |
| **ಮಹಾಪೋಷಕ ಸದಸ್ಯತ್ವಕ್ಕೆ** | ..... | ರೂ. | **25,001/-** |

ಪ್ರತಿಮನೆಯಲ್ಲಿ ತಾಯಿ, ಹೆಂಡತಿ, ಹೆಣ್ಣು ಮಕ್ಕಳು, ಅಕ್ಕ, ತಂಗಿ, ಅತ್ತಿಗೆ, ಅತ್ತೆ ಎಲ್ಲರೂ ಅಥವಾ ಯಾರಾದರೂ ಇದ್ದೇ ಇರುತ್ತಾರೆ. ನಿಮಗೆ ಇಷ್ಟ ಬಂದವರ ಹೆಸರಲ್ಲಿ ಪತ್ರಿಕೆ ಅಭಿವೃದ್ಧಿಗೆ ಪ್ರೋತ್ಸಾಹವನ್ನು ನೀಡಬೇಕೆಂದು ಕೋರಿದೆ. ಈ ಪತ್ರಿಕೆಯಿಂದ ಒಳ್ಳೆಯ ಮಾಹಿತಿಗಳನ್ನು ಜೀವನದಲ್ಲಿ ಟೆನ್‌ಷನ್ ಫ್ರೀಯಾಗಿರಲು ವಿಷಯಗಳನ್ನು ನೀಡುವುದೇ ಪತ್ರಿಕೆಯ ಉದ್ದೇಶವಾಗಿದೆ. ಯೋಚಿಸಿ ಒಂದು ಒಳ್ಳೆಯ ನಿರ್ಧಾರಕ್ಕೆ ಬನ್ನಿ. ನಿಮ್ಮ ಬಂಧು, ಬಳಗ, ಸ್ನೇಹಿತರಿಗೆ ತಿಳಿಸಿ. ನೀವು ಹಾಗೂ ಅವರನ್ನು ಚಂದಾದಾರರನ್ನಾಗಿ ಮಾಡಬೇಕೆಂದು ವಿನಂತಿಸಿದೆ.

**"ಇದು ನಿಮ್ಮ ಮಹಿಳಾ ಪತ್ರಿಕೆ. ಪ್ರೋತ್ಸಾಹಿಸಿ, ಬೆಳೆಸಿ."**

## ಚೀನಾ ಓಪನ್ ಮಹಿಳಾ ಡಬಲ್ಸ್ ಟೂರ್ನಿ



ಇತ್ತೀಚೆಗೆ ಬೀಜಿಂಗ್‌ನಲ್ಲಿ ಚೀನಾ ಓಪನ್ ಮಹಿಳಾ ಡಬಲ್ಸ್ ಟೂರ್ನಿ ನಡೆದಿದ್ದು ಭಾರತದ ಸಾನಿಯಾ ಮಿರ್ಜಾ ಮತ್ತು ಮಾರ್ಟಿನಾ ಹಿಂಗಿಸ್ ಜೋಡಿ ಫೈನಲ್ಸ್ ಗೆದ್ದು ಪ್ರಶಸ್ತಿ ಪಡೆದರು. ಈ ಜೋಡಿ ಸುಮಾರು ಒಂದುವರೆ ಗಂಟೆಗೂ ಹೆಚ್ಚು ಆಟವಾಡಿತು. ಎದುರಾಳಿ ಚೀನಾದ ಜೋಡಿ ಸುಲಭವಾಗಿ ಸೋಲಲು ತಯಾರಿಲ್ಲದ್ದರಿಂದ ದಿಟ್ಟ ಹೋರಾಟವನ್ನು ನಡೆಸಿತಾದರೂ ಕೊನೆಗೆ ಸೋಲನ್ನು ಒಪ್ಪಿ ದ್ವಿತೀಯ ಸ್ಥಾನ ಪಡೆಯಿತು.

ಸಾನಿಯಾ ಹಿಂಗಿಸ್ ಜೋಡಿ ಒಂದಾದ ಮೇಲೆ ಒಂದರಂತೆ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಳ್ಳುತ್ತಿದೆ. ಒಳ್ಳೆಯ ಆಟ ಆಡುತ್ತಿರುವುದಕ್ಕೆ ಸೋಲೇ ಇಲ್ಲ. ಇದೇ ರೀತಿ ಜೋಡಿ ಒಗ್ಗಟ್ಟಿನಿಂದ ಕೂಡಿ ಇನ್ನು ಹಲವಾರು ಪ್ರಶಸ್ತಿಗಳನ್ನು ಗೆಲ್ಲಲಿ ಎಂಬುದೇ ಅಭಿಮಾನಿಗಳ ಆಶಯ.

## ದೆಬೋರಾ ಇತಿಹಾಸದಲ್ಲಿ ಸೇರ್ಪಡೆ

ತೈವಾನ್ ಕಪ್ ಟ್ರಾಕ್ ಇಂಟರ್‌ನ್ಯಾಷನಲ್ ಕ್ಲಾಸಿಕ್ ಸೈಕ್ಲಿಂಗ್ ಸ್ಪರ್ಧೆಯಲ್ಲಿ 20 ವರ್ಷ ಭಾರತದ ದೆಬೋರಾ ಐದು ಪದಕಗಳನ್ನು ಗೆದ್ದು ಹೊಸ ಇತಿಹಾಸವನ್ನು ಬರೆದಿದ್ದಾರೆ. ಇವರು ಒಂದು ಚಿನ್ನ, ಮೂರು ಬೆಳ್ಳಿ ಮತ್ತು ಒಂದು ಕಂಚಿನ ಪದಕವನ್ನು ಪಡೆಯುವ ಮೂಲಕ ಈ ಸಾಧನೆ ಮಾಡಿದ ಪ್ರಥಮ ಭಾರತೀಯ ಸೈಕ್ಲಿಸ್ಟ್ ಆದರು. ಈ ಕಿರು ವಯಸ್ಸಿನಲ್ಲೇ ಸಾಧನೆ ಮಾಡಿದ ದೆಬೋರಾ ಇನ್ನೂ ಹೆಚ್ಚು ಹೆಚ್ಚು ಸಾಧನೆಗಳನ್ನು ಮಾಡಲಿ ಎಂದು ಮವಿ ಬಳಗ ಶುಭವನ್ನು ಹಾರೈಸಿದೆ.

## ಮಹಿಳಾ ಬಾಲ್ ಬ್ಯಾಡ್ಮಿಂಟನ್

ಮಾಂಡವ್ಯ ವಲಯ ಮಟ್ಟದ ಅಂತರ ಕಾಲೇಜುಗಳ ಮಹಿಳೆಯರ ಬಾಲ್ ಬ್ಯಾಡ್ಮಿಂಟನ್ ಕ್ರೀಡಾಕೂಟ ಮಂಡ್ಯ ಜಿಲ್ಲೆಯ ಹಲಗೂರಿನಲ್ಲಿ ನಡೆಯಿತು. ಕೆಆರ್ ಪೇಟೆ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿಯರಾದ ದಿವ್ಯ, ಸುಧಾರಾಣಿ, ಅಂಬಿಕ, ಅಪೂರ್ವ, ಸುನೀತರವರಿಂದ ಕೂಡಿದ ತಂಡ ಪ್ರಥಮ ಸ್ಥಾನವನ್ನು ಗಳಿಸಿತು.

## ಸೈನಾಗೆ ಬೆಂಗಳೂರು ಸ್ಪೆಷಲ್ ಅಂತೆ



ಭಾರತದ ಸೈನಾ ನೆಹ್ವಾಲ್ ಬ್ಯಾಡ್ಮಿಂಟನ್ ಆಟಗಾರ್ತಿ ಕಳೆದ ಒಂದು ವರ್ಷದಲ್ಲಿ ಹಲವಾರು ಪ್ರಶಸ್ತಿಗಳನ್ನು ಗಳಿಸಿ ದೇಶಕ್ಕೆ ಕೀರ್ತಿಯನ್ನು ತಂದಿದ್ದಾರೆ. ಇದಕ್ಕೆ ಕಾರಣವೇನೆಂದರೆ ಅವರು ಬೆಂಗಳೂರು ನಗರವನ್ನು ಸ್ಪೆಷಲ್ ಅಂತಾ ಹೇಳುತ್ತಾರೆ. ಏಕೆಂದರೆ ಬೆಂಗಳೂರಿನಲ್ಲಿ ತರಬೇತಿ ಯನ್ನು ವಿಮಲ್ ಕುಮಾರ್ ರಿಂದ ಆರಂಭಿಸಿದ್ದೇ ಇದಕ್ಕೆಲ್ಲಾ ಕಾರಣ ಅಂತಾರೆ.

ಈ ಪ್ರಶಸ್ತಿ ಬರುವ ಮೊದಲು ಅಂದರೆ ಕಳೆದ ವರ್ಷ ಕ್ರೀಡೆಯಿಂದ ನಿವೃತ್ತಿ ಪಡೆಯುವ ಚಿಂತನೆಯಲ್ಲಿದ್ದ ಸೈನಾ ದಿಢೀರನೇ ಈ ವರ್ಷ ಇಷ್ಟೆಲ್ಲಾ ಪ್ರಶಸ್ತಿಗಳನ್ನು ಬಾಚಿಕೊಂಡಿದ್ದಾರೆ. ಇನ್ನೊಂದು ರಹಸ್ಯವೆಂದರೆ ಸೈನಾ ತಾಯಿ ಉಷಾ ರಾಣಿ ಮಗಳಿಗೆ ಚಿಕ್ಕ ವಯಸ್ಸಿನಲ್ಲೇ ಒಲಂಪಿಕ್ಸ್ ಪದಕ ಗೆಲ್ಲುವ ಕನಸನ್ನು ಮೂಡಿಸಿದ್ದರಿಂದ ಅಮ್ಮ ಹಾಗೂ ಅತ್ಯುತ್ತಮ ಗೆಳತಿಯೂ ಸಹ ಎಂದು ಕಾರ್ಯಕ್ರಮವೊಂದರಲ್ಲಿ ತಿಳಿಸಿದರು.


**ಮೈಸೂರು ಜನತೆಗೆ ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು**

**ತೇಜಸ್ ಬಿಲ್ಡರ್ಸ್**

**ಮೈಸೂರು**

ಸರ್ಕಾರಿ ನೌಕರರಿಗೆ ಮಾತ್ರಾ ಯಾವುದೇ ಅಡ್ವಾನ್ಸ್ ಇಲ್ಲದೆ ಶೇಕಡಾ **25**ರಷ್ಟು ಕೆಲಸ ಮುಗಿಯುವವರೆಗೆ ಸಾಮಾನು ಸಹಿತ ವಾಸ್ತು ಪ್ರಕಾರ ಅಂದವಾಗಿ ಮನೆಯನ್ನು ಕಟ್ಟಿಕೊಡಲಾಗುವುದು.

ಸಂಪರ್ಕಿಸಿ : **8970308730 / 9845849004**



**ನಾಡಿನ ಜನತೆಗೆ ನವರಾತ್ರಿ / ದಸರಾ ಹಬ್ಬದ ಶುಭಾಶಯಗಳು ತಾಯಿ ಚಾಮುಂಡೇಶ್ವರಿ ದೇವಿ ತಮ್ಮೆಲ್ಲರ ಸಕಲ ಇಷ್ಟಾರ್ಥಗಳನ್ನು ನೇರವೇರಿಸಲಿ.**

**ಕೆ.ಆರ್. ಮೋಹನ್‌ಕುಮಾರ್**

ಅಧ್ಯಕ್ಷರು,
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
ಜೆ.ಎಲ್.ಬಿ. ರಸ್ತೆ, ಮೈಸೂರು.
ಮೊ: **8105209999**



**ನಗರದ ಹಾಗೂ ನಾಡಿನ ಜನತೆಗೆ ದಸರಾ ಹಬ್ಬದ ಶುಭಾಶಯಗಳು ಚಾಮುಂಡೇಶ್ವರಿ ದೇವಿಯು ಎಲ್ಲರಿಗೂ ಒಳ್ಳೆಯದನ್ನು ಮಾಡಲಿ**

ಎಂ. ಶಿವಣ್ಣ

**ಕಾರ್ಪೋರೇಟರ್, 26ನೇ ವಾರ್ಡ್, ಹೆಬ್ಬಾಳ್**
ಮೈಸೂರು ಮಹಾನಗರಪಾಲಿಕೆ, ಮೈಸೂರು
ಮೊ : **9449841026**



**ಮೈಸೂರು ನಗರ ಹಾಗೂ ನಾಡಿನ ಜನತೆಗೆ ಚಾಮುಂಡೇಶ್ವರಿ ದೇವಿ ಸರ್ವರಿಗೂ ಸನ್ಮಾಂಗಳವನ್ನುಂಟು ಮಾಡಲಿ ಹಾಗೂ ಎಲ್ಲರಿಗೂ ದಸರಾ ಹಬ್ಬದ ಶುಭಾಶಯಗಳು.**

ಸಿ.ಪಿ. ತಮ್ಮಣ್ಣ

ರಾಜಕೀಯ ಮುಖಂಡರು
ಜನಮನರಂಗ, ಸಿದ್ದಾರ್ಥನಗರ, ಮೈಸೂರು.
ಮೊ : **9620752999**


**ಹೊಸದಾಗಿ ಸದಸ್ಯತ್ವ ಬಯಸುವವರು ಸಂಪರ್ಕಿಸಿ 9379777793**

### ಅಭಿನಂದನೆಗಳು

ಈ ಕೆಳಗೆ ತಿಳಿಸಿರುವ ಮಹಿಳಾ ಸಂಘಗಳು ನಮ್ಮ ಪತ್ರಿಕೆಯ ವಾರ್ಷಿಕ ಸದಸ್ಯತ್ವವನ್ನು ಪಡೆದಿರುವುದಕ್ಕೆ ಮಹಿಳಾ ವಿಶೇಷ ಬಳಗವು ಸಂಘದ ಎಲ್ಲಾ ಸದಸ್ಯರುಗಳಿಗೂ ಅಭಿನಂದನೆಯನ್ನು ಸಲ್ಲಿಸುತ್ತದೆ.

ಅಧ್ಯಕ್ಷರು : ತಾಯಮ್ಮ ಉಪಾಧ್ಯಕ್ಷರು: ಸುಂದ್ರಮ್ಮ
ಕಾರ್ಯದರ್ಶಿ : ರಾಜೇಶ್ವರಿ
**ಶ್ರೀ ರಾಜೇಶ್ವರಿ ಮಹಿಳಾ ಸಂಘ**
ಮಂಚನಹಳ್ಳಿ

ಅಧ್ಯಕ್ಷರು : ರಾಜೇಶ್ವರಿ ಉಪಾಧ್ಯಕ್ಷರು: ವಸಂತ
ಕಾರ್ಯದರ್ಶಿ : ಸರಿತಾ
**ಶ್ರಿ ದುರ್ಗಾಂಭದೇವಿ ಮಹಿಳಾ ಸಂಘ**
ಸುಗ್ಗನಹಳ್ಳಿ


# ಮಹಿಳಾ ವಿಶೇಷ

**ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ**
**(ಪ್ರತಿ ಮಂಗಳವಾರ)**

**ಮೈಸೂರು ಕಛೇರಿ :**
ಸಂಖ್ಯೆ 1021, 14 ನೇ ಕ್ರಾಸ್ 2 ನೇ ಹಂತ,
ಹೆಬ್ಬಾಳು, ಮೈಸೂರು - 570 017

**ಬೆಂಗಳೂರು ಕಛೇರಿ :**
ಸಂಖ್ಯೆ 734, ನ್ಯೂ ಮಸೀದಿ ರಸ್ತೆ,
ಟಿ. ದಾಸರಹಳ್ಳಿ, ಬೆಂಗಳೂರು - 560 057

**ಹೆಚ್.ವಿ. ವೆಂಕಟಸುಬ್ಬರಾವ್,** ಸಂಪಾದಕರು **8880334444**
**(ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ನೌಕರ)**


Edited, Published & Owned by H.V.Venkatasubbarao, #1021, 14th Cross, 2nd Stage, Hebbal, Mysore-570017 and Printed at Annapoorna Offset Printer, #511, 14th Main, Saraswathipuram, Mysore-570009. Bangalore Office:#734, New Masjid Road, Near Metro Statn., T.Dasarahalli, Bangalore-560057 Mob.:8880334444,Email:mahilavishesha@yahoo.com Editor: H.V. Venkatasubbarao, Decl.No.: MAG.90/2015-16